ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಆ) ಪ್ರಶ್ನೆ ಇಲ್ಲ.

ಆ) ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಹೊಸ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸುವ ಬಗ್ಗೆ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಸುರತ್ಕಲ್‌ನಲ್ಲಿ ಪೋಲೀಸ್ ಠಾಣೆಯನ್ನು ಮತ್ತು ಕಾವೂರಿನಲ್ಲಿ ಹೊರಠಾಣೆಯನ್ನು ಸ್ಥಾಪಿಸುವ ಪ್ರಸ್ತಾಪನೆ ಸರ್ಕಾರದಲ್ಲಿ ಸಧ್ಯಕ್ಕೆ ಇರುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ.—ಮಾನ್ಯ ಸಭಾಧ್ಯಕ್ಷರೇ, ಸುರತ್ಕಲ್ ಕ್ಷೇತ್ರವು ನವಮಂಗಳೂರು ಬಂದರಿಗೆ ಹತ್ತಿರದಲ್ಲಿರುವುದರಿಂದ ಇದನ್ನು ಬಂದರು ಪ್ರದೇಶವೆಂದು ಪರಿಗಣಿಸಲ್ಪಟ್ಟಿರುವುದರಿಂದ ಹಾಗೂ ಕುದುರೆಮುಖ ಪ್ರಾಜೆಕ್ಟ್ ಕೂಡ ಈ ಒಂದು ಪ್ರದೇಶಕ್ಕೆ ಸಮೀಪದಲ್ಲಿರುವುದರಿಂದಲೂ ಮೂಲ್ಕಿ ಪಟ್ಟಣ ಪ್ರದೇಶವು ಇಲ್ಲಿಂದ ಕೇವಲ ೧೫ ಕಿ.ಮೀ. ಅಂತರದಲ್ಲಿರುವುದರಿಂದಲೂ ಸುರತ್ಕಲ್‌ನಲ್ಲಿ ಪೋಲೀಸ್ ಠಾಣೆಯನ್ನು ಸ್ಥಾಪಿಸುವುದು ಅವಶ್ಯಕವಾಗಿದೆ ಎಂದು ತಮ್ಮ ಗಮನಕ್ಕೆ ತಂದು ಈ ಬಗ್ಗೆ ಆದಷ್ಟು ಜಾಗೃತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಸರಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

(ಉತ್ತರವಿಲ್ಲ)

ಶ್ರೀ ವಿನಯಕುಮಾರ್ ಸೊರಕೆ (ಪ್ರ ಸಂ. ೧೩೫೫) : ಗೈರು ಹಾಜರು

ಶ್ರೀ ಎಂ, ನಾರಾಯಣಸ್ವಾಮಿ (ಪ್ರ ಸಂ: ೧೬೭) : ಗೈರು ಹಾಜರು

ಬಗರ್ ಹುಕುಂ ಜಮೀನುಗಳ ಮಂಜೂರಾತಿ

೧೭೪. ಬಿ. ಹೆಚ್. ಬನ್ನಿಕೋಡ್(ಹಿರೇಕೆರೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಬಗರ್ ಹುಕುಂ ಪರವಾನಿಗೆಯಿಂದ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಭೂರಹಿತ ಕಾರ್ಮಿಕರಿಗೆ ಮಂಜೂರು ಮಾಡಲು ಸರ್ಕಾರ ಉದ್ದೇಶಿಸಿದೆಯೇ. ಹಾಗಿದ್ದಲ್ಲಿ ತಾಲ್ಲೂಕುವಾರು ಮಾಹಿತಿ ನೀಡುವುದು,

ಆ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಇ) ಪಶುಪಾಲರಿಗೂ ಕಾಯ್ದಿಟ್ಟ ಹುಲ್ಲುಗಾವಲುಗಳನ್ನು ಸಾಗುವಳಿಗೆ ಕೊಡಲು ಸರ್ಕಾರ ಉದ್ದೇಶಿಸಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕುಂದಾಯ ಮಂತ್ರಿಗಳು).

ಅ) ಭೂರಹಿತ ಕಾರ್ಮಿಕರು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸಲು ಸರ್ಕಾರ ಉದ್ದೇಶಿಸಿದ ದಿನಾಂಕ : ೧-೧-೮೮ರವರೆಗೆ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಭೂರಹಿತ ಕಾರ್ಮಿಕರ ವಿವರಗಳು ಈ ಕೆಳಕಂಡಂತೆ ಇವೆ :—

	ತಾಲ್ಲೂಕುಗಳು	ಸಂಖ್ಯೆ	ವಿಸ್ತೀರ್ಣ
೧	ಧಾರವಾಡ	೧೮	೯೩–೦೭
೨	ಹುಬ್ಬಳ್ಳಿ	—	—
೩	ಕಲಘಟಗಿ	೨೪	೭೩–೨೭
೪	ನವಲಗುಂದ	೧೪೧	೩–೧೦
೫	ಗದಗ	೧೯	೬೬–೧೪
೬	ರೋಣ	—	—
೭	ಮುಂಡರಗಿ	—	—
೮	ನರಗುಂದ	—	—
೯	ಹಾವೇರಿ	—	—
೧೦	ರಾಣಿಬೆನ್ನೂರು	೯೪	೩೩೮–೧೧
೧೧	ಬ್ಯಾಡಗಿ	೧೩೦	೩೭೩–೩೮
೧೨	ಹಿರೇಕೆರೂರು	೭೫	೨೨೮–೩೮
೧೩	ಸವಣೂರು	—	—
೧೪	ಶಿಗ್ಗಾಂವ್	೬	೧೮–೩೫
೧೫	ಕುಂದಗೋಲು	—	—
೧೬	ಶಿರಹಟ್ಟಿ	—	—
೧೭	ಹಾಸಗಲ್	೫೪೯	೩೮೪–೦೮
		೧೦೫೬	೧೫೮೦–೨೯

ಆ) ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಇ) ಆದೇಶ ಹೊರಡಿಸಿದ ನಂತರ ಪರಿಶೀಲಿಸಲಾಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ಕೇಳಿದ ಪ್ರಶ್ನೆ ಏನೆಂದರೆ, ಧಾರವಾಡ ಜಿಲ್ಲೆಯಲ್ಲಿ ಬಗರ್ ಹುಕುಂ ಪರವಾನಿಗೆಯಿಂದ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಭೂರಹಿತ ಕಾರ್ಮಿಕರಿಗೆ ಮಂಜೂರು ಮಾಡಲು ಸರ್ಕಾರ ಉದ್ದೇಶಿಸಿದೆಯೇ? ಆ ಬಗ್ಗೆ ತಾಲ್ಲೂಕುವಾರು ಮಾಹಿತಿಕೊಡಿ ಎಂದು ಕೇಳಿಕೊಂಡಿದ್ದೇನೆ. ಅದಕ್ಕೆ ಉತ್ತರದಲ್ಲಿ ಭೂರಹಿತ ಕಾರ್ಮಿಕರು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸಲು ಸರ್ಕಾರ ಉದ್ದೇಶಿಸಿದೆ ಎಂದು ಹೇಳಿದ್ದಾರೆ. ಈ ಬಂದು ಬಗರ್‌ಹುಕುಂ ಸಾಗುವಳಿ ಯಾವ ಯಾವ ರೀತಿಯಲ್ಲಿನ ಜಮೀನಿನಲ್ಲಿ ಬರುತ್ತದೆ ಎಂಬುದನ್ನು ತಿಳಿಸಿಲ್ಲ. ಇಂಥ ಬಗರ್ ಹುಕುಂ ಪರವಾನಿಗೆಯಿಂದ ಸಾಗುವಳಿ ಮಾಡುತ್ತಿರುವ ಜನರು ಅರಣ್ಯ ಭೂಮಿಯಲ್ಲಿ ತಲೆ ಮಾರುಗಳಿಂದ ಅಂದರೆ ೨ ಮಾರು ೪೦–೫೦ ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಈ ಜನರು ಬಡವರು ಹಾಗೂ ಹಿಂದುಳಿದ ವರ್ಗದವರು. ಹೀಗೆ ಸಾಗುವಳಿ ಮಾಡಿಕೊಂಡಿದ್ದಂಥ ಜಮೀನನ್ನು ಸರ್ಕಾರದವರು ಸಿ ಎಂಡ್ ಡಿ ಭೂಮಿ ಎಂದು ವರ್ಗೀಕರಣ ಮಾಡಿ ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ, ಹೀಗೆ ಭೂಮಿ

ಕಳೆದುಕೊಳ್ಳುವ ಜನರು ಬಡವರು ಆಗಿರುತ್ತಾರೆ. ಇಂಥ ಭೂಮಿಯನ್ನು ಅಧಿಕಾರಿಗಳು ಕಾಗದದಲ್ಲಿ ಸಿ ಎಂಡ್ ಡಿ ಭೂಮಿಯನ್ನು ಅರಣ್ಯ ಇಲಾಖೆಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅರಣ್ಯ ಇಲಾಖೆಯವರು ಸುಮಾರು ೭೫ ಸಾವಿರ ಎಕರೆ ಅರಣ್ಯ ಭೂಮಿಯನ್ನು ಕೆ ಪಿ. ಸಿ, ಯವರಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಈಗ ಇಲ್ಲಿರತಕ್ಕಂಥ ಭೂಮಿ ಯಾವುದು ? ಅಂದರೆ ಈ ಪ್ರದೇಶದಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದ ಜಮೀನು ಯಾವ ವರ್ಗಕ್ಕೆ ಸೇರಿದ್ದು ? ಇದು ಪಡ ಭೂಮಿಯೋ ? ಹುಲ್ಲುಗಾವಲೋ ? ಅಥವಾ ಸಿ ಎಂಡ್ ಡಿ ಭೂಮಿಯೋ ಅಥವಾ ಅರಣ್ಯ ಇಲಾಖೆಗೆ ಸೇರಿದ ಭೂಮಿಯೋ ಎಂಬ ಬಗ್ಗೆ ಮಾನ್ಯ ಸಚಿವರು ಪರಿಶೀಲಿಸಿ ಹೇಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇಲ್ಲಿ ಮಾನ್ಯ ಸಚಿವರು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂಮಿಯ ವಿವರ ಗಳನ್ನು ಕೊಟ್ಟಿದ್ದಾರೆ. ಇವನ್ನು ಕೊಡುವುದಕ್ಕೆ ಮುಂಚೆ ವಿವರಗಳನ್ನು ಕೊಡುವಂತೆ ಕೇಳಿಕೊಂಡು ಅರ್ಜಿಗಳನ್ನು ಕರೆದಿದ್ದೀರಾ ? ಇಲ್ಲಿ ಕೊಟ್ಟಿರತಕ್ಕಂಥ ತಾಲ್ಲೂಕುವಾರು ಅಂಕಿ ಅಂಶಗಳು ಯಾವ ಮೂಲಕ ತಮಗೆ ಬಂದುವು ಎಂದು ದಯವಾಡಿ ತಿಳಿಸಬೇಕು. ಭೂ ಮಂಜೂರಾತಿ ಮಾಡಲು ಅರ್ಜಿಗಳನ್ನು ಯಾವಾಗ ಕರೆದಿದ್ದಿರಿ ? ಅದಕ್ಕೆ ಕೊನೇ ದಿನಾಂಕ ಯಾವುದು ಇದು ಯಾವುದೂ ಬಗರ್‌ಹುಕುಂಸವರೆಗೆ ಗೊತ್ತಿಲ್ಲ. ದಯವಿಟ್ಟು ವಿವರವಾಗಿ ಇವನ್ನೆಲ್ಲ ಹೇಳಬೇಕು.

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—ಈಗ ನಾನು ಕೊಟ್ಟಿರುವ ಅಂಕಿ ಸಂಖ್ಯೆ ಗಳು ಸರ್ಕಾರದ ೮ವಿನ್ಯೂ ಇಲಾಖೆ ದಾಖಲೆಗಳಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವವರು ಎಂದು ನಮೂದಾಗಿರುವುದನ್ನು ಆಧರಿಸಿದ್ದು, ಫಾರೆಸ್ಟ್ ಇಲಾಖೆಯವರ ಅಂಕಿ ಅಂಶಗಳು ಇದರಲ್ಲಿ ಲಗತ್ತಾಗಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನಾನು ಕೇಳಿದ ಪ್ರಶ್ನೆ, ತಲೆತಲಾಂತರದಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಸರ್ಕಾರದವರು ಅರಣ್ಯ ಭೂಮಿಯೆಂದು, ಸಿ ಮತ್ತು ಡಿ ಭೂಮಿ ಯೆಂದು ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ ಆದರೆ ನೂರಾರು ವರ್ಷಗಳಿಂದ ಯಾರು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವರೋ ಅವರಿಗೆ ಪಟ್ಟಾ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ? ಈಗಾಗಲೇ ಅನ್ಯಾಯವಾಗಿ ಅರಣ್ಯ ಇಲಾಖೆಗೆ ಮತ್ತು ಖಾಸಗಿ ಜನರಿಗೆ ಕೊಟ್ಟಿರುವ ಭೂಮಿಯನ್ನು ವಾಪಸ್ ತೆಗೆದುಕೊಳ್ಳುವುದನ್ನು ಪರಿಶೀಲಿಸುತ್ತೀರಾ ?

ಶ್ರೀ ಕೆ. ಹೆಚ್, ಪಾಟೀಲ್.—ಬಗರ್‌ಹುಕುಂ ಆಗಿರುವ ಫಾರೆಸ್ಟ್ ಜಮೀನನ್ನು ಸಕ್ರಮಗೊಳಿ ಸುವ ಕಕ್ಷೆಯಲ್ಲಿ ಇದು ಬರುವುದಿಲ್ಲ. ಆ ತರಹ ಕೊಡಬೇಕೆಂದು ನೀವು ಹೇಳುವುದಾದರೆ ನಮ್ಮ ಸರ್ಕಾರ ಕೇಂದ್ರದ ಫಾರೆಸ್ಟ್ ಆಕ್ಟ್ ಏನಿದೆ ಅದರ ಮುಖಾಂತರ ಕೇಂದ್ರಕ್ಕೆ ವಿಚಾರ ಮಾಡುವುದು.

ಶ್ರೀ ಬಿ. ಹೆಚ್. ಬನ್ನಿಕೋಡ್.—ಹುಲ್ಲುಗಾವಲಿಗೆಂದು ಬಿಟ್ಟಿದ್ದ ಜಮೀನನ್ನು ಸಾಗುವಳಿದಾರರಿಗೆ ಕೊಡುವ ವಿಚಾರ ಸರ್ಕಾರಕ್ಕೆ ಇದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಇಲ್ಲ, ಸರ್ಕಾರ ಆ ಬಗ್ಗೆ ಆಲೋಚನೆ ಮಾಡಿಲ್ಲ.

ಅಧ್ಯಕ್ಷರು.—ರಾಮಲಿಂಗಾರೆಡ್ಡಿಯವರು ಅಬ್ಸೆಂಟ್. ನೆಕ್ಸ್ಟ್.

ರೈತರಿಗೆ ಟ್ರ್ಯಾಕ್ಟರುಗಳ ವಿತರಣೆ

೮. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದ ಕೃಷಿ ಸಹಕಾರ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಮೂಲಕ ೧೯೮೮-೮೯ ಮತ್ತು ೧೯೮೯-೯೦ ರಲ್ಲಿ ರೈತರಿಗೆ ವಿತರಿಸಲಾದ ಟ್ರ್ಯಾಕ್ಟರುಗಳ ಸಂಖ್ಯೆ ಎಷ್ಟು ?

ಆ) ಟ್ರ್ಯಾಕ್ಟರುಗಳನ್ನು ಹೊಂದಿರುವ ರೈತರುಗಳು ಸಕಾಲದಲ್ಲಿ ಸಾಲದ ಕಂತನ್ನು ಮರು ಪಾವತಿ ಮಾಡಿದರೆ ಬಡ್ಡಿ ರಿಯಾಯಿತಿ ದರವೆಷ್ಟು ?

ಇ) ಈ ರಿಯಾಯಿತಿ ಬಡ್ಡಿ ದರದ ಸೌಲಭ್ಯ ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ.

ಡಾ. ಹೆಚ್. ಆರ್ ರಾಜು (ಸಹಕಾರ ರಾಜ್ಯ ಮಂತ್ರಿಗಳು),—

(ಅ) ೧೯೮೮-೮೯—ಸಂಖ್ಯೆ : ೨೦೬೫

೧೯೮೯-೯೦—ಸಂಖ್ಯೆ : ೬೨೨